ರಾಜಕುಮಾರ ಅವನಿಗೆ ಧನ್ಯವಾದಗಳನ್ನು ಹೇಳಿ ಬೇಗ ಬೇಗ ಆ ಅರಮನೆಯ ಬಳಿ ಬಂದನು. ಅಲ್ಲಿ ಎಲ್ಲಾ ಆ ಕುಳ್ಳ ಹೇಳಿದಂತೆಯೇ ಮಾಡಿ ಸುಲಭವಾಗಿ ಒಳಹೊಕ್ಕನು. ಆ ಅರಮನೆಯಲ್ಲಿ ಅಂದೇ ಒಂದು ದೊಡ್ಡ ಸಮಾರಂಭ ನಡೆದಿದ್ದು, ಯಾವುದೋ ಒಂದು ಮಂತ್ರಶಕ್ತಿಗೆ ಒಳಗಾದವರಂತೆ ನೆರೆದ ಜನರೆಲ್ಲರೂ ಎಲ್ಲಿದ್ದರೋ ಅಲ್ಲೇ, ಹೇಗಿದ್ದವರು ಹಾಗೇ ನಿದ್ರಾವಾಶರಾಗಿದ್ದರು. ರಾಜಕುಮಾರ ಒಬ್ಬ ಸೈನಿಕನ ಕತ್ತಿಯನ್ನು ತೆಗೆದುಕೊಂಡು ತನ್ನ ಸೊಂಟಕ್ಕೆ ಸಿಕ್ಕಿಸಿಕೊಂಡು ಮುಂದೆ ಹೋದಾಗ, ಅಲ್ಲಿ ರೇಷ್ಮೆ ಪರದೆಯನ್ನು ಇಳಿಬಿಟ್ಟ ಕೊನೆಯ ಕೋಣೆಯಲ್ಲಿ ದೊಡ್ಡ ಸುಪ್ಪತ್ತಿಗೆಯ ಮೇಲೆ ಪರಮ ಸುಂದರಿಯಾದ ರಾಜಕುಮಾರಿಯೊಬ್ಬಳು ಮಲಗಿದ್ದಳು. ಇವನು ಕುತೂಹಲದಿಂದ ಅವಳನ್ನು ಸಮೀಪಿಸುತ್ತಲೂ ಅವಳು ನಿದ್ರೆಯಿಂದ ಎಚ್ಚೆತ್ತವಳಂತೆ ಎದ್ದು, 'ಬಂದೆಯಾ ರಾಜಕುಮಾರ? ನೂರು ವರ್ಷಗಳಿಂದ ನಿನಗಾಗಿ ಕಾದಿದ್ದೇನೆ. ನನ್ನನ್ನು ಮದುವೆಯಾಗು. ಈ ಅರಮನೆಯನ್ನು ಮುಸುಕಿರುವ ಮಾಂತ್ರಿಕ ಶಕ್ತಿಯನ್ನು ಮಾಯವಾಗಿಸು' ಎಂದು ಕೇಳಿಕೊಂಡಳು.

ರಾಜಕುಮಾರನಿಗೂ ಅಂತಹ ಸುಂದರಿಯ ಮೇಲೆ ತುಂಬಾ ಮನಸ್ಸಾಯಿತು. ಆದರೆ, ಅವನು ಜಾಗೃತನಾಗಿ, 'ಖಂಡಿತ ರಾಜಕುಮಾರಿ, ಇನ್ನೊಂದು ವರ್ಷಕ್ಕೆ ಸರಿಯಾಗಿ ಇದೇ ದಿನ ಬಂದು ನಿನ್ನನ್ನು ಮದುವೆಯಾಗುತ್ತೇನೆ. ಈಗ ನನಗೆ ದಯವಿಟ್ಟು ಇಲ್ಲಿರುವ ಮಂತ್ರದ ಬಾವಿಯನ್ನು ತೋರಿಸು' ಎಂದನು. ಅವಳು ಅವನನ್ನು ಬಾವಿಯ ಬಳಿ ಕರೆದುಕೊಂಡು ಹೋಗಲು ರಾಜಕುಮಾರ ತನ್ನಲ್ಲಿದ್ದ ಸೀಸೆಗೆ ಆ ಬಾವಿಯ ಪವಿತ್ರ ಜಲವನ್ನು ತುಂಬಿಕೊಂಡು ಅವಳಿಗೆ ಧನ್ಯವಾದ ಹೇಳಿ ಬೇಗ ವಾಪಸ್ಸಾಗುವಾಗ ದಾರಿಯಲ್ಲಿ ಮತ್ತೆ ಆ ಕುಳ್ಳ ಎದುರಾದನು.

ಅವನಿಗೆ ರಾಜಕುಮಾರ ಎಲ್ಲ ವಿಷಯ ತಿಳಿಸುತ್ತಲೂ ಅವನು ಸಂತೋಷದಿಂದ, 'ಒಳ್ಳೇದು ಮಾಡಿದೆ. ನಿನ್ನ ಹತ್ತಿರ ಇರುವ ಕತ್ತಿಯಿಂದ ಯುದ್ಧ ಮಾಡಿದರೆ ನಿನಗೆ ಸೋಲೇ ಇಲ್ಲ. ಈ ರೊಟ್ಟಿ ಎಷ್ಟು ತಿಂದರೂ ಮುಗಿಯುವುದೇ ಇಲ್ಲ. ಹೋಗಿ ಬಾ ನಿನಗೆ ಒಳ್ಳೆಯದಾಗಲಿ' ಎಂದನು. ಆದರೆ ರಾಜಕುಮಾರ ತನ್ನ ಅಣ್ಣಂದಿರನ್ನು ಮರೆತಿರಲಿಲ್ಲ. ಅವರ ಗತಿ ಏನಾಯಿತೆಂದು ತಿಳಿಸಬೇಕೆಂದು ಕೇಳುತ್ತಲೂ 'ಅವರ ಅಹಂಕಾರಕ್ಕೆ ತಕ್ಕ ಶಿಕ್ಷೆಯಾಯಿತು' ಎಂದನು ಕುಳ್ಳ ಮನುಷ್ಯ. ರಾಜಕುಮಾರ ಅವರ ಪರವಾಗಿ ಕ್ಷಮೆ ಕೇಳಿ ಅವರನ್ನು ಬಿಟ್ಟುಬಿಡಬೇಕೆಂದು ಕೇಳಿಕೊಳ್ಳಲು ಮನಸ್ಸು ಕರಗಿ ಬಿಟ್ಟುಬಿಟ್ಟನು.

ಅಣ್ಣ ತಮ್ಮಂದಿರು ಮೂವರೂ ತ್ವರೆಯಿಂದ ಪ್ರಯಾಣ ಮಾಡಿ ರಾತ್ರಿ ಒಂದು ಛತ್ರದಲ್ಲಿ ತಂಗಿದರು. ರಾಜಕುಮಾರ ತನಗೆ ಜೀವಜಲ ದೊರೆತ ಎಲ್ಲ ವಿಷಯವನ್ನೂ ಅಣ್ಣಂದಿರಿಗೆ ವಿಷದವಾಗಿ ತಿಳಿಸಿದ. ಅವರಿಬ್ಬರಿಗೂ ತಮ್ಮನ ಮೇಲೆ ತುಂಬಾ ಹೊಟ್ಟೆಕಿಚ್ಚು ಹುಟ್ಟಿಬಂದಿತು. 'ಇವನು ಜೀವಜಲ ತಂದನೆಂದು ನಮ್ಮ ತಂದೆಗೆ ಈಗ ಇವನ ಮೇಲೆ ತುಂಬಾ ಪ್ರೀತಿ ಹುಟ್ಟುತ್ತದೆ. ನಾಳೆ ಇವನಿಗೇ ಪಟ್ಟವನ್ನು ಕಟ್ಟುತ್ತಾರೆ. ಅನ್ಯಾಯವಾಗಿ ನಮಗೆ ರಾಜ್ಯವಿಲ್ಲದೇ ಹೋಗುತ್ತದೆ. ಆದ್ದರಿಂದ ಏನಾದರೂ ಮಾಡಿ ಇದು ನಡೆಯದಂತೆ ಮಾಡಬೇಕು' ಎಂದು ಮಾತಾಡಿಕೊಂಡು, ರಾಜಕುಮಾರನಿಗೆ ನಿದ್ದೆ ಹತ್ತುತ್ತಲೂ ಇಬ್ಬರೂ ಅವನ ಬಳಿ ಇದ್ದ ಜೀವ ಜಲವನ್ನು ತಮ್ಮ ಸೀಸೆಗಳಿಗೆ ತುಂಬಿಕೊಂಡು, ಅವನ ಸೀಸೆಗೆ ಛತ್ರದ ಬಳಿಯಿದ್ದ ಹಳ್ಳದ ನೀರನ್ನು ತುಂಬಿಸಿಟ್ಟರು.

ಮರುದಿನ ಬೆಳಿಗ್ಗೆ ಅರಮನೆ ತಲುಪಿದ ಕೂಡಲೆ ಕಿರಿಯ ರಾಜಕುಮಾರ ಉತ್ಸಾಹದಿಂದ ತಂದೆಯ ಬಳಿಗೆ ಹೋಗಿ 'ಅಪ್ಪ ಜೀವ ಜಲವನ್ನು ತಂದಿದ್ದೇನೆ' ಎಂದು ಕೂಗುತ್ತ ತನ್ನ ಸೀಸೆಯಲ್ಲಿದ್ದ ನೀರನ್ನು ಪ್ರೀತಿಯಿಂದ ಕುಡಿಸಿದ. ಆದರೆ ಆ ಕಲುಷಿತ ನೀರಿನಿಂದ ರಾಜನ ಬೇನೆ ಮತ್ತಷ್ಟು ಜೋರಾಯಿತು. ತಕ್ಷಣ ಹಿರಿಯರಿಬ್ಬರೂ ತಮ್ಮ ಸೀಸೆಯಿಂದ ನಿಜವಾದ ಜೀವಜಲವನ್ನು ಕುಡಿಸಿದ